ಅರಸೀಕೆರೆ ತಾಲ್ಲೂಕಿನ ನೇರಲಗೆ ಮತ್ತು ಚೆಗಚಿಗೆರೆ ಗ್ರಾಮಗಳಿಗೆ ಹೊಸದಾಗಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ

೭೫೭ (೧೫೯೪) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮಾನ್ಯ ಸಚಿವರು ಅರಸೀಕೆರೆಗೆ ಪ್ರವಾಸ ಬಂದಿದ್ದಾಗ ಅರಸೀಕೆರೆ ತಾಲ್ಲೂಕ್ ಗಂಡಸಿ ಕ್ಷೇತ್ರದ ನೇರಲಗೆ ಮತ್ತು ಚಗಚಗೆರೆ ಗ್ರಾಮಗಳಿಗೆ ೧೯೮೦-೮೧ನೇ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಯನ್ನು ಕೊಡುವುದಾಗಿ ತಿಳಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಬಂದಿರುವುದು ನಿಜ,

ಆ) ಆಯುಕ್ತರಿಂದ ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಹಾಸನ ಜಿಲ್ಲೆ ದುದ್ದ ಗ್ರಾಮದ ಪ್ರೌಢಶಾಲೆಗೆ ಕಟ್ಟಡವಿಲ್ಲದಿರುವ ಬಗ್ಗೆ

೭೫೮ (೧೫೯೩) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಾಸನ ತಾಲ್ಲೂಕ್ ದುದ್ದ ಹೋಬಳಿಯ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜು ಗಳಲ್ಲಿ ಇರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಯಾವ ಪ್ರಮಾಣದ ಶಾಲಾ ಕಟ್ಟಡ ವಿದ್ಯಾರ್ಥಿಗಳಿಗೆ ಇರಬೇಕಾಗಿದೆ?

ಇ) ಹಾಲಿ ಇರುವ ಕಟ್ಟಡದ ಪ್ರಮಾಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಪ್ರೌಢಶಾಲೆ — ೫೪೭
ಸಂಯುಕ್ತ ಪದವಿ ಪೂರ್ವ ಕಾಲೇಜು (೧೦+೧೭ — ೨೭
ಒಟ್ಟು ೫೭೩

ಆ) ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಬೇಕಾಗಿರುವ ಶಾಲಾ ಕಟ್ಟಡದ ಪ್ರಮಾಣ:

೧.	ಪ್ರತಿ ತರಗತಿಗೆ	—	೧ ಕೊಠಡಿಯಂತೆ
೨.	ಸಿಬ್ಬಂದಿ ಕೊಠಡಿ		೧
೩.	ಪ್ರಾಚಾರ್ಯರ ಮತ್ತು ಕಛೇರಿ ಕೊಠಡಿ	—	೧+೧
೪.	ಗ್ರಂಥಾಲಯ	—	೧
೫.	ಪ್ರಯೋಗಾಲಯ	—	೮
	(ಪದವಿ ಪೂರ್ವ ಮಟ್ಟದಲ್ಲಿ ವಿಜ್ಞಾನ ವಿಷಯ ಈ ಕಾಲೇಜಿನಲ್ಲಿ ಇರುವುದಿಲ್ಲ)		
೬.	ಗೇಮ್ಸ್ ಕೊಠಡಿ	—	೧
೭.	ಕ್ರಾಫ್ಟ್ ಕೊಠಡಿ	—	೧
೮.	ವಿವಿಧೋದ್ದೇಶ ಹಾಲ್	—	೧
೯.	ಹೆಣ್ಣು ಮಕ್ಕಳ ನಿರೀಕ್ಷಣ ಕೊಠಡಿ	—	೧